

# ಜಾಕಿ ಪ್ರೇಮಕಥೆಯ ಒಲವು

ಭಾರತ–ಚೀನಾ ಸಹಯೋಗದಲ್ಲಿ ನಡೆದ ಮೂರು ಸಿನಿಮಾ ನಿರ್ಮಾಣದ ಒಪ್ಪಂದದ ಮೊದಲ ಚಿತ್ರ 'ಕುಂಗ್ ಫು ಯೋಗ' ತೆರೆ ಕಾಣುತ್ತಿದೆ. ನಟ ಜಾಕಿ ಚಾನ್ ಚೀನಾದಲ್ಲಿ ಮಾತ್ರವಲ್ಲ, ಭಾರತದಲ್ಲಿಯೂ ಜೋರಾಗಿ ಪ್ರಚಾರ ನಡೆಸುತ್ತಿದ್ದಾನೆ. ಕಪಿಲ್ ಶರ್ಮಾನ ಕಾಮಿಡಿ ಶೋ, ಸಲ್ಮಾನ್ ಮನೆ ಹೀಗೆ ಹತ್ತಾರು ಕಡೆ ಉತ್ಸಾಹದಿಂದ ಸುತ್ತಾಡುತ್ತಿದ್ದಾನೆ. ತನ್ನ ವಿಶಿಷ್ಟ ಆ್ಯಕ್ಷನ್–ಮ್ಯಾನರಿಸಂ ತಾಕತ್ತಿನಿಂದ ಗಮನ ಸೆಳೆದಿರುವ ಜಾಕಿಗೆ ಬಾಲಿವುಡ್ ಸಿನಿಮಾಗಳತ್ತ ಸೆಳೆತ ಉಂಟಾಗಿದೆ. ಬರಿಯ ಆ್ಯಕ್ಷನ್‌ಗಳನ್ನು ಮಾಡಿ ಬೇಸತ್ತಿರುವುದಾಗಿ ಹೇಳಿಕೊಂಡಿರುವ ಜಾಕಿ, ಹಿಂದಿ ಸಿನಿಮಾಗಳಲ್ಲಿ ರೊಮ್ಯಾನ್ಸ್ ಮಾಡಲು ಬಯಸುತ್ತಿದ್ದಾನೆ. 'ಬಾಲಿವುಡ್ ಸಿನಿಮಾಗಳಲ್ಲಿ ನಟಿಸಲು ಇಷ್ಟ. ತನ್ನನ್ನು ಬಳಸಿಕೊಳ್ಳಿ ಎಂದು ಬಾಲಿವುಡ್ ನಿರ್ದೇಶಕರಿಗೆ ತಿಳಿ ಹೇಳಿ' ಎಂದು ಕೇಳಿಕೊಂಡಿದ್ದಾನೆ ಜಾಕಿ. 'ನನಗಿನ್ನು ಆ್ಯಕ್ಷನ್ ಸಾಕು. ನನಗೆ ಕುಣಿಯುವ ಮತ್ತು ಪ್ರೇಮಕಥೆಯೊಂದನ್ನು ಮಾಡುವ ಆಸೆ ಉಂಟಾಗಿದೆ. ಅದಕ್ಕಾಗಿ ತುಂಬಾ ಪ್ರಯತ್ನಿಸಿದ್ದೇನೆ. ಆದರೆ ಕಥೆ ಹೊಂದಾಣಿಕೆಯಾಗಿಲ್ಲ. ಹನ್ನೊಂದು ವರ್ಷದ ಬಳಿಕ ಮತ್ತೆ ಇಲ್ಲಿದ್ದೇನೆ. ಬಾಲಿವುಡ್ ಸಿನಿಮಾ ಮಾಡುವುದು ನನ್ನ ಕನಸು' ಎಂದಿದ್ದಾನೆ ಆತ. ಭಾರತಕ್ಕೆ ಮತ್ತೆ ಮತ್ತೆ ಬರುವ ಬಯಕೆಯೂ ಆತನಲ್ಲಿದೆ. ಇಲ್ಲಿನ ಸಿನಿಮೋತ್ಸವಗಳಲ್ಲಿ ಭಾಗವಹಿಸಲು, ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ಸಿನಿಮಾಗಳಲ್ಲಿ ನಟಿಸಲು ಬರಬೇಕು ಎಂದಿದ್ದಾನೆ. ಜಾಕಿ ಚಾನ್, ತನ್ನ ಸಿನಿಮಾ ಜೀವನದ ಸಾಧನೆಗಾಗಿ ಕಳೆದ ವರ್ಷ ಆಸ್ಕರ್‌ನ ಗೌರವ ಪ್ರಶಸ್ತಿಗೆ ಪಾತ್ರನಾಗಿದ್ದ. ಆತನ ಸಿನಿಮಾಗಳು ರಂಜಿಸಿದ್ದರೂ, ಯಾವ ಸಿನಿಮಾವೂ ಆಸ್ಕರ್ ಗೆದ್ದುಕೊಟ್ಟಿರಲಿಲ್ಲ. ತಾನು ಪ್ರಶಸ್ತಿಗಾಗಿ ಸಿನಿಮಾ ಮಾಡುವವನಲ್ಲ. ತನ್ನ ಗುರಿ ಏನಿದ್ದರೂ ಅಭಿಮಾನಿಗಳು ಎನ್ನುವುದು ಆತನ ನೀತಿ. ಇದೇ ದಾರಿಯಲ್ಲಿ ನಡೆಯುವ ತನ್ನನ್ನು ಆಸ್ಕರ್ ಹುಡುಕಿಕೊಂಡು ಬಂತೇ ವಿನಾ, ತಾನು ಅದನ್ನು ಅರಸಿ ಹೋಗಲಿಲ್ಲ ಎಂದಿದ್ದಾನೆ ಜಾಕಿ. 'ಕುಂಗ್ ಫು ಯೋಗ' ಚಿತ್ರದಲ್ಲಿ ಬಾಲಿವುಡ್‌ನ ಸೋನು ಸೂದ್, ದಿಶಾ ಪಟಾನಿ ಮತ್ತು ಅಮಿರಾ ದಾಸ್ತುರ್ ನಟಿಸಿದ್ದಾರೆ.

# 'ನಕಾರಾತ್ಮ ಕತೆ ಅನಿವಾರ್ಯ'

ಎರಡು ವರ್ಷದ ಹಿಂದೆ 'ಹೀರೊ' ಚಿತ್ರದಲ್ಲಿ ಕಾಣಿಸಿಕೊಂಡಿದ್ದ ಅತಿಯಾ ಶೆಟ್ಟಿ, ಈಗ ಮತ್ತೆ ಬಾಲಿವುಡ್ ಅಂಗಳದಲ್ಲಿ ಓಡಾಡುತ್ತಿದ್ದಾಳೆ. ಈ ನಡುವೆ ಆಕೆ ಸುದ್ದಿಯಾಗಿದ್ದು, ತನ್ನ ಲಿಂಕ್–ಅಪ್ ರೂಮರ್‌ಗಳ ಕಾರಣದಿಂದ. ಸುನಿಲ್ ಶೆಟ್ಟಿಯ ಮುದ್ದಿನ ಮಗಳು ವೃತ್ತಿ ಮತ್ತು ಖಾಸಗಿ ಬದುಕಿನ ವಿಚಾರದಲ್ಲಿ ನಿರಂತರವಾಗಿ ಗಾಸಿಪ್‌ಗಳಿಗೆ ಆಹಾರವಾಗುತ್ತಿರುವವಳು. ರೂಮರ್‌ಗಳು ವೃತ್ತಿಯ ಅನಿವಾರ್ಯ ಭಾಗ ಎನ್ನುವುದು ಆಕೆಯ ಅಭಿಪ್ರಾಯ. ಅದನ್ನು ಒಪ್ಪಿಕೊಂಡರೂ, ಕೆಲವೊಮ್ಮ ಅವು ಆಕೆಯನ್ನು ಕಾಡುತ್ತವೆಯಂತೆ. ಒಮ್ಮೊಮ್ಮೆ ಸುದ್ದಿಗಳು ಮನಸಿಗೆ ಕಿರಿಕಿರಿ ಉಂಟು ಮಾಡುತ್ತವೆ. ನಕಾರಾತ್ಮಕ ಸಂಗತಿಗಳನ್ನು ತೀರಾ ಗಂಭೀರವಾಗಿ ಪರಿಗಣಿಸುವುದಿಲ್ಲ. ಅದನ್ನು ರಚನಾತ್ಮಕವಾಗಿ ತೆಗೆದುಕೊಳ್ಳುವುದಾಗಿ ಆಕೆ ಹೇಳಿಕೊಂಡಿದ್ದಾಳೆ.

'ಬಾಲಿವುಡ್ ಕುರಿತು ಅನೇಕರಲ್ಲಿ ನಕಾರಾತ್ಮಕ ಗ್ರಹಿಕೆಗಳಿವೆ. ಆದರೆ ನನಗೆ ಅಂತಹ ಅನುಭವ ಇದುವರೆಗೂ ಆಗಿಲ್ಲ. ಏಕೆಂದರೆ ಇಲ್ಲಿ ಎಲ್ಲರೂ ನನಗೆ ಪ್ರೀತಿ ತೋರುತ್ತಿದ್ದಾರೆ, ಪ್ರೋತ್ಸಾಹ ನೀಡುತ್ತಿದ್ದಾರೆ' ಎಂದಿದ್ದಾಳೆ ಅತಿಯಾ. ಅರ್ಜುನ್ ಕಪೂರ್ ಜತೆಗೆ ಅತಿಯಾ ಪ್ರೇಮ ಪ್ರಸಂಗ ನಡೆಯುತ್ತಿದೆ ಎಂದು ಸರಣಿ ಸರಣಿಯಾಗಿ ಸುದ್ದಿಗಳು ಪ್ರಕಟವಾಗಿದ್ದವು. ಕೊನೆಗೆ ಮುಜುಗರಕ್ಕೀಡಾದ ಅರ್ಜುನ್ ಕಪೂರ್, ಈ ರೀತಿ ಏನೂ ನಡೆದೇ ಇಲ್ಲ ಎಂದು ಸ್ಪಷ್ಟನೆ ನೀಡಿದ್ದ. ಸದ್ಯ, ಅತಿಯಾ ಬಹುತಾರಾಗಣದ 'ಮುಬಾರಕನ್' ಚಿತ್ರದಲ್ಲಿ ನಟಿಸುತ್ತಿದ್ದಾಳೆ.

